ದಿ: 22/07/2022 ರ ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಇಂದು ದಿನಾಂಕ 08-08-2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ. ಎನ್.ಆರ್.ಜಿ. ವಕೀಲರಿಂದ

ಫಕೀರಪ್ಪನ ಪರಿಚಯ ಇರುತ್ತದೆ. ದುರುಗಪ್ಪ ಪರಿಚಯ ಇರುವುದಿಲ್ಲ. ಯಮನವ್ವನ ಗಂಡನ ಹೆಸರು ಏನೆಂದರೆ ಸಾಕ್ಷಿಯು ಆಕೆಯು ದೇವದಾಸಿ ಇರುತ್ತಾಳೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ತಂದೆಯಾದ ದುರುಗಪ್ಪನು ಯಮನವ್ವನ ಮಗನಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಪೂರ್ವದಲ್ಲಿ ನನ್ನ ತಂದೆಯ ಹೆಸರಿನಲ್ಲಿತ್ತು. ದಾವಾ ಆಸ್ತಿಯು ಪೂರ್ವದಲ್ಲಿ ಮೊದಲು

ಯಮನವ್ವಳ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿರುವ ಆಸ್ತಿಯ ಒಟ್ಟು ಕ್ಷೇತ್ರ ಪೂರ್ವ ಪಶ್ಚಿಮ 27 ಫೀಟ್, ಉತ್ತರ ದಕ್ಷಿಣ 30 ಫೀಟ್ ಇರುತ್ತದೆ. ಸದರಿ ಆಸ್ತಿಯಲ್ಲಿ ಅರ್ಧ ಭಾಗವನ್ನು ನನ್ನ ತಂದೆ ಪ್ರತಿವಾದಿಯ ತಂದೆಯಾದ ದುರುಗಪ್ಪನಿಗೆ ಬರೆದುಕೊಟ್ಟಿದ್ದ ಎಂದರೆ ಸರಿಯಲ್ಲ. ಅದರಲ್ಲಿ ಪೂರ್ವ ಪಶ್ಚಿಮ 15 ಫೀಟ್, ಉತ್ತರ ದಕ್ಷಿಣ 27 ಫೀಟ್ ಆಸ್ತಿಯು ನನ್ನದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯು ಪ್ರತಿವಾದಿಯ ತಂದೆಯ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನನ್ನ ತಂದೆ ಆತನ ಸ್ವಂತ ಒಪ್ಪಿಗೆ ಮೇರೆಗೆ ಬಿಟ್ಟುಕೊಟ್ಟಿದ್ದ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆಗೆ ಬಂದಿದೆ ಎಂದು ಹೇಳಲಾದ ಜಾಗೆಯನ್ನು ಒತ್ತುವರಿ ಮಾಡಿ ಮನೆಯನ್ನು ಕಟ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಿಂಧನೂರಿನ ಸಿ.ಎಂ.ಸಿ.ನೇದ್ದರಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಸದರಿ ಆಸ್ತಿಯನ್ನು ತನ್ನ ಹೆಸರಿಗೆ ಮಾಡುವಂತೆ ಪ್ರತಿವಾದಿಯ ತಂದೆ ಸಿ.ಎಂ.ಸಿ.ಯವರಿಗೆ ಅರ್ಜಿ ಕೊಟ್ಟಿದ್ದ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ಆತನ ತಂದೆ ತೀರಿಕೊಂಡ ನಂತರ ಅರ್ಜಿಯನ್ನು ನೀಡಿದ್ದ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯು ತಂದೆಗೆ ಆಸ್ತಿ ಇರುವುದಿಲ್ಲ ಎಂದು ಹಿಂಬರಹ ಕೊಟ್ಟಿರುತ್ತಾರೆ. ಸದರಿ ಆಸ್ತಿಯ ಮುನ್ಸಿಪಾಲ್ಟಿಯ ಹಳೆಯ ನಂಬರ್ 6-2-132/1, 6-2-127 ಆಸ್ತಿಗಳು ಪ್ರತಿವಾದಿಯ ತಂದೆಯಾದ ದುರುಗಪ್ಪನ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಫಕೀರಪ್ಪ ಈತನು ತನ್ನ ಅಣ್ಣನಾದ ದುರುಗಪ್ಪ ಈತನಿಗೆ ಅರ್ಧ ಭಾಗವನ್ನು ಬರೆದುಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಗೆ ಅರ್ಧ ಭಾಗದಷ್ಟು ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮುಟೇಶನ್‌ಗಾಗಿ ಅರ್ಜಿಯನ್ನು ಸಲ್ಲಿಸಿದಾಗ ಲಿಖಿತವಾಗಿ ತಕರಾರು ಸಲ್ಲಿಸಿದ್ದೆ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

2 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.